ಕೇಶವರೆಡ್ಡಿ ಹಂದ್ರಾಳ

ಕಲೆ: ಪ್ರವೀಣ್ ಆಚಾರ್ಯ

# ತಂಗ್ಳನ ಎಲಕ್ಕಿ ಬುಡ್ಡೆ



ಸಾಮಾನ್ಯವಾಗಿ ಪ್ರತಿನಿತ್ಯ ಬೆಳಗ್ಗೆ ಐದೂ ಐದೂವರೆ ಗಂಟೆಗೆ ಎದ್ದು ದನದ ಕೊಟ್ಟಿಗೆಯನ್ನು ಕ್ಲೀನ್ ಮಾಡಿ, ಎರಡು ಮೂರು ತಟ್ಟೆಯಾಗುತ್ತಿದ್ದ ಕಸವನ್ನು ಫರ್ಲಾಂಗು ದೂರದ ರೊಪ್ಪದಲ್ಲಿದ್ದ ತಿಪ್ಪೆಗೆ ಹಾಕಿ, ಹಾಗೆಯೇ ಅಲ್ಲೇ ಹೊಟ್ಟೆಯೊಳಗಿನ ಕಸವನ್ನು ಖಾಲಿ ಮಾಡಿ ಕೆರೆಯಲ್ಲಿ ಕ್ಲೀನ್ ಮಾಡಿಕೊಂಡು ಬಂದು, ಇದ್ದಿಲು ಉಪ್ಪಿನ ಮಿಕ್ಸರ್‌ನಲ್ಲಿ ಹಲ್ಲುಜ್ಜಿ ಬಚ್ಚಲಿನ ಗುಡಾಣದಾಗಿನ ಬಿಸಿನೀರಿನಲ್ಲಿ ಮುಖ ತೊಳೆದು ಎರಡು ಎಮ್ಮೆಗಳ ಹಾಲನ್ನು ಕರೆದು ಆರೂವರೆ ಗಂಟೆಯೊಳಗೆ ಊರ ಮುಂದಿದ್ದ ಡೈರಿಗೆ ಹಾಕಿ ಬಂದು, ಅಷ್ಟೊತ್ತಿಗೆ ರೆಡಿಯಾಗಿರುತ್ತಿದ್ದ ಎರಡು ಕಪ್ ಕಾಫಿಯನ್ನು ಒಟ್ಟಿಗೆ ಸೊರ್ ಸೊರ್ ಅಂತ ಕುಡಿದು, ಒಂದು